ಇ) ಇಲಾಖೆಯಲ್ಲಿ ಒಟ್ಟು 1,166 ಅರಣ್ಯ ಪ್ರೇರಕರು ಅರೆಕಾಲಿಕ/ಅಂಶ ಕಾಲಿಕ ನೆಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಈ ಅರೆಕಾಲಿಕ ನೌಕರರ ಸೇವೆಯನ್ನು ಸಕ್ರಮಗೊಳಿಸುವ ವಿಷಯದಲ್ಲಿ ರಾಜ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:17628–17651/97 ರಲ್ಲಿ ದಿನಾಂಕ: 30–7–1997 ರಂತೆ ನೀಡಲಾದ ತೀರ್ಪಿನ ಅನುಸಾರ ಸರ್ಕಾರದ ಸಂಖ್ಯೆ:ಎಫ್ಇಇ 56 ಎಫ್ಎಪಿ 98 ದಿನಾಂಕ: 11–3–98 ರಲ್ಲಿ ಆದೇಶ ಹೊರಡಿಸಿ ಅರಣ್ಯ ಪ್ರೇರಕರು ಅರೆಕಾಲಿಕ ಗೌರವ ಧನ ಪಡೆಯುವ ಸ್ವಯಂ ಪ್ರೇರಕ ಸೇವೆಯಾಗಿರುವುದರಿಂದ ಇವರನ್ನು ನಾಗರೀಕ ಸೇವೆಯ ಹುದ್ದೆಗಳಲ್ಲಿ ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ತಿಳಿಸಿದೆ. ಮುಂದುವರೆದು, ಈ ಕುರಿತು ದಿನಾಂಕ: 22–5–98 ರಲ್ಲಿ ಅಂದಿನ ಸರ್ಕಾರದ ಮಾನ್ಯ ಸಚಿವ ಸಂಪುಟದ ಉಪ ಸಮಿತಿಯು ಪರಿಶೀಲಿಸಿ ಇವರು ಗೌರವ ಧನ ಪಡೆಯುತ್ತಿರುವುದರಿಂದ ಸೇವೆಯಲ್ಲಿ ಸಕ್ರಮಗೊಳಿಸುವ ಬದಲಿಗೆ ಅರಣ್ಯ ಇಲಾಖೆಯ ನೇಮಕಾತಿಯಲ್ಲಿ ಇವರಿಗೆ ವಯೋಮಿತಿ ಸಡಿಲಿಕೆ ವಿನಾಯಿತಿ ನೀಡಲು ತೀರ್ಮಾನಿಸಲಾಗಿದೆ. ಅದರಂತೆ, ಅಧಿಸೂಚನೆ ಸಂಖ್ಯೆ: ಡಿಪಿಎಆರ್ 42 ಎಸ್ಆರ್ಡಿ 2001 ದಿನಾಂಕ: 17–10–2001 ರಲ್ಲಿ ತಿದ್ದುಪಡಿ ಮಾಡಲಾದ ನೇಮಕಾತಿ ನಿಯಮಗಳಲ್ಲಿ ಅರಣ್ಯ ಪ್ರೇರಕರಿಗೆ ಸೂಕ್ತ ವಯೋಮಿತಿ ಸಡಿಲಿಕೆಯನ್ನು ನೀಡಲಾಗಿದೆ.

ಈ) ಯಾವುದೇ ಅನಗತ್ಯ ತೊಂದರೆಯನ್ನು ನೀಡಲಾಗುತ್ತಿಲ್ಲ. ಹೊನ್ನಾವರ ತಾಲ್ಲೂಕು ಮಹಿಮೆ ಗ್ರಾಮದಲ್ಲಿ ಜಿಲ್ಲಾಪಂಚಾಯತ್ ಇಂಜಿನಿಯರಿಂಗ್ ವತಿಯಿಂದ ಅನಧಿಕೃತವಾಗಿ ರಸ್ತೆಯನ್ನು ಅಗಲೀಕರಣಗೊಳಿಸಲು ಯತ್ನಿಸಿದೆ. ಇದು ಅರಣ್ಯ ಕಾಯಿದೆಯ ಉಲ್ಲಂಘನೆಯಾಗಿರುವುದರಿಂದ ಅರಣ್ಯ ಮೊಕದ್ದಮೆ ದಾಖಲಿಸಿ ಕಾನೂನು ಕ್ರಮ ಜರುಗಿಸಲಾಗಿದೆ. ಈ ಸಂಬಂಧ ಅರಣ್ಯ ಜಮೀನು ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸುವ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ 2004ರಲ್ಲಿಯೇ ಸೂಚನೆ ನೀಡಲಾಗಿದೆ ಮತ್ತು ನೆನಪೋಲೆ ಸಹ ನೀಡಲಾಗಿದೆ. ಸದರಿಯವರಿಂದ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗಿದೆ.

843(1147) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾವರದ ಶರಾವತಿ ಟೇಲ್ ರೇಸ್ ಯೋಜನೆಯಡಿಯಲ್ಲಿ, ಅಲ್ಲಿನ ನಾಗರೀಕರು ಮೂಲಭೂತ ಸೌಕರ್ಯಗಳಿಂದ ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿಗೆ ತೆಗೆದುಕೊಂಡಿರುವ ಕ್ರಮಗಳೇನು?

ಇ) ಸದರೀ ಯೋಜನೆ ವ್ಯಾಪ್ತಿಯಲ್ಲಿ ಪ್ರೌಢಶಾಲೆಗೂ ಎಲ್ಲಾ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸರ್ಕಾರ ಪರಿಗಣಿಸುವುದೇ?

ಈ) ಪರಿಗಣಿಸಿದ್ದಲ್ಲಿ, ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

(ಅ ಮತ್ತು ಆ) ಹೊನ್ನಾವರ ಶರಾವತಿ ಟೇಲ್ ರೇಸ್ ಯೋಜನೆಯಡಿಯಲ್ಲಿ ಯಾವುದೇ ಗ್ರಾಮ ಅಥವಾ ಕುಟುಂಬಗಳು ಬಾಧಿತವಾಗಿರುವುದಿಲ್ಲ. ಈ ಯೋಜನೆಯಿಂದ ಬಾಧಿತವಾಗಿದ್ದ ಮಾಸ್ತಿಜಯಮ್ಮ ದೇವಸ್ಥಾನ ಸಮಿತಿಯವರು ಆಯ್ಕೆಮಾಡಿದ್ದ ಸ್ಥಳದಲ್ಲಿ ಎಲ್ಲಾ ಸೌಲಭ್ಯಗಳೊಂದಿಗೆ 16.10 ಲಕ್ಷಗಳ ವೆಚ್ಚದಲ್ಲಿ ಪುನರ್ ನಿರ್ಮಾಣಮಾಡಲಾಗಿದೆ ಹಾಗೂ ಒಂದು ಸೇತುವೆ ಒಳಗೊಂಡ 5.25 ಕಿ.ಮೀ. ಉದ್ದದ ಬೆಂಗಳೂರು – ಹೊನ್ನಾವರ ಸರ್ವರುತು ಬದಲಿ ರಸ್ತೆಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ನಿಗಮವು ನಿರ್ಮಿಸಿರುತ್ತದೆ.

(ಇ ಮತ್ತು ಈ) ಶರಾವತಿ ಟೇಲ್ ರೇಸ್ ಯೋಜನೆಯ ನಿಗಮದ ವಸಾಹತುವಿನ ಸಮೀಪದಲ್ಲಿರುವ ಗೇರುಸೊಪ್ಪ ಗ್ರಾಮದಲ್ಲಿ ಒಂದು ಸರ್ಕಾರಿ ಪ್ರೌಢಶಾಲೆ ಇರುತ್ತದೆ.

ಸದರಿ ಪ್ರೌಢಶಾಲೆಗೆ ಜಿಲ್ಲಾ ಪಂಚಾಯತ್, ಕಾರವಾರ ಇವರ ವತಿಯಿಂದ ಅಭಿವೃದ್ಧಿ ಅಥವಾ ಇತರೇ ಸೌಲಭ್ಯಗಳನ್ನು ಒದಗಿಸಬೇಕಾಗಿರುತ್ತದೆ.

ಆದಾಗ್ಯೂ ಪ್ರೌಢಶಾಲೆಗೆ ಗಣಕಯಂತ್ರದ ಕೊಠಡಿ, ಆಟದ ಮೈದಾನ ಹಾಗೂ ಶಾಲಾ ಕಾಂಪೌಂಡ್ ಒದಗಿಸಬೇಕೆಂದು ಇತ್ತೀಚೆಗೆ ಕೋರಿಕೆ ಬಂದಿರುತ್ತದೆ. ಸದರಿ ಕೋರಿಕೆಯನ್ನು ಮುಖ್ಯ ಅಭಿಯಂತರು ಕಾಮಗಾರಿ (ಶರಾವತಿ)ರವರು ಪರಿಶೀಲಿಸುತ್ತಿರುತ್ತಾರೆ.

844(1454) ಶ್ರೀ ಶಿವಾನಂದ ಪಾಟೀಲ್ (ಬಸವನ ಬಾಗೇವಾಡಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಸವೇಶ್ವರ ಜನ್ಮಭೂಮಿ ಬಸವನ ಬಾಗೇವಾಡಿಯನ್ನು ಕೂಡಲಸಂಗಮ ಅಭಿವೃದ್ಧಿ ಪ್ರಾಧಿಕಾರದಡಿ ಸೇರಿಸಲಾಗಿದೆಯೇ;

ಆ) ಪ್ರಾದಿಕಾರದಿಂದ ಬಸವನಬಾಗೇವಾಡಿಯಲ್ಲಿ ಯಾವಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ?

ಇ) ಪ್ರಾಧಿಕಾರದಿಂದ ಇವುಗಳಿಗೆ ಒದಗಿಸಿದ ಅನುದಾನ ಎಷ್ಟು?

ಈ) ಯಾವ ನಿರ್ದಿಷ್ಟ ಕಾಲಮಿತಿ ಹಾಕಿಕೊಂಡು ಪ್ರಾಧಿಕಾರವು ಬಸವನ ಬಾಗೇವಾಡಿಯನ್ನು ಅಭಿವೃದ್ಧಿಪಡಿಸುವುದು?

ಶ್ರೀ ಎಂ. ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) – ಹೌದು –

ಆ) ಬಸವನ ಬಾಗೇವಾಡಿ ಪಟ್ಟಣದಲ್ಲಿ ಕೆಳಕಂಡ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

1) ಬಸವ ಸಾಂಸ್ಕೃತಿಕ ಕೇಂದ್ರದ ಕಟ್ಟಡ ನಿರ್ಮಾಣ.

2) ಬಸವೇಶ್ವರ ದೇವಸ್ಥಾನದ ಸಂಕೀರ್ಣದಲ್ಲಿ 63 ಅಂಗಡಿ ಮಳಿಗೆಗಳ ಮತ್ತು ಉಪಹಾರ ಗೃಹಗಳ ನಿರ್ಮಾಣ.

3) ದೇವಸ್ಥಾನದ ಪಕ್ಕದಲ್ಲಿ ಅಂದಾಜು 2.00 ಎಕರೆ ಪ್ರದೇಶದಲ್ಲಿ ಉದ್ಯಾನವನ ನಿರ್ಮಿಸುವ ಕಾಮಗಾರಿ. ಬಸವ ಸಾಂಸ್ಕೃತಿಕ ಕೇಂದ್ರದಿಂದ ವಿಜಾಪೂರ ಮುದ್ದೇಬಿಹಾಳ ಮುಖ್ಯ ರಸ್ತೆಯವರೆಗೆ ಒಂದು ಸಂಪರ್ಕ ರಸ್ತೆ ನಿರ್ಮಾಣ ಇದರಲ್ಲಿ 51 ಮನೆಗಳ ಹಾಗೂ ಖಾಲಿ ನಿವೇಶನಗಳನ್ನು ಒದಗಿಸುವುದು ಮತ್ತು ಸಂಪರ್ಕ ರಸ್ತೆ ಕಲ್ಪಿಸಿಕೊಡುವುದು.

ಇ) ಈ ಮೇಲಿನ ಕಾಮಗಾರಿಗಳಿಗಾಗಿ ಅಂದಾಜು ರೂ. 3.00 ಕೋಟಿ ವೆಚ್ಚ ತಗಲುವುದು, ಇದುವರೆಗೆ ಬಿಡುಗಡೆಯಾದ ಅನುದಾನದ ವಿವರಗಳು ಕೆಳಕಂಡಂತಿವೆ.

1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ	ರೂ. 18.00 ಲಕ್ಷ.
2) ಲೋಕಸಭಾ ಸದಸ್ಯರ ವಂತಿಗೆ	ರೂ. 25.00 ಲಕ್ಷ.
	ರೂ. 43.00 ಲಕ್ಷ